


# ಸುಲ್ತಾನ್ ಬತ್ತೇರಿ

ಮಂಗಳೂರಿನ ಇತಿಹಾಸ ಬಹಳ ಪ್ರಾಚೀನವಾದುದು. ಗ್ರೀಸಿನ ಪ್ಲೀನಿ ಮತ್ತು ಪೆರಿಪ್ಲಸ್ ಎಂಬುವರು ಕ್ರಿ.ಶ.150ರಲ್ಲಿ ತಾವು ಬರೆದ ಪುಸ್ತಕದಲ್ಲಿ ಮಂಗಳೂರನ್ನು ಹೆಸರಿಸಿದ್ದಾರೆ. ಹಿಂದೆ ಆಳುಪರು ಮಂಗಳೂರನ್ನು ತಮ್ಮ ರಾಜಧಾನಿಯಾಗಿಸಿದ್ದರು. ಆ ಬಳಿಕ ಬದನೂರಿನ ನಾಯಕರು ಪೋರ್ಚುಗೀಸರನ್ನು ಇಲ್ಲಿಂದ ಸೋಲಿಸಿ ಹೊರಗಟ್ಟಿದ್ದರು. ಹೈದರಾಲಿ 1763ರಲ್ಲಿ ಈ ಪ್ರದೇಶವನ್ನು ಆಕ್ರಮಿಸಿ ಸಾಮ್ರಾಜ್ಯ ವಿಸ್ತರಿಸಿಕೊಂಡಿದ್ದನು. ಟಿಪ್ಪೂ ಸುಲ್ತಾನ್ ಆಳ್ವಿಕೆಯಲ್ಲಿ ಮಂಗಳೂರಿನ ನದೀ ತೀರದಲ್ಲಿ ಬೃಹತ್ತಾದ ಕೋಟೆಯಂತೆ ಕಾಣುವ ವೀಕ್ಷಣಾ ಗೋಪುರವನ್ನು ಕಟ್ಟಿಸಿದ್ದು ಕುತೂಹಲಕರ. ಪರಾಕ್ರಮಿಯಾಗಿದ್ದು, ಯುದ್ಧತಂತ್ರಗಳಲ್ಲಿ ನಿಪುಣನಾಗಿದ್ದ ಟಿಪ್ಪುಸುಲ್ತಾನ್ ಮುಂದಾಲೋಚನೆ ವಹಿಸಿ, ಗುರುಪುರ ನದಿಗೆ ಯುದ್ಧ ನೌಕೆಗಳು ಬರುವುದನ್ನು ತಡೆಯಲು ಕಾವಲು ಕೋಟೆಯಾದ ಸುಲ್ತಾನ ಬತ್ತೇರಿಯನ್ನು ನಿರ್ಮಿಸಿದ್ದ.

(18ನೇ ಪುಟ ನೋಡಿ)

ಕನ್ನಡ ಕರಾವಳಿಯಲ್ಲಿ ಟಿಪ್ಪು ಸುಲ್ತಾನ್ ಕಟ್ಟಿಸಿರುವ ಕಾವಲು ಕೋಟೆಗಳಲ್ಲಿ ಈಗಲೂ ಸುಭದ್ರವಾಗಿ ಉಳಿದಿರುವುದು ಈ ಸುಲ್ತಾನ್ ಬತ್ತೇರಿ. ಅಡಿಪಾಯ ಇಲ್ಲದೆ ಸುಮಾರು 60 ಅಡಿ ಎತ್ತರದ ಈ ಕಾವಲು ಗೋಪುರವನ್ನು ಕಟ್ಟಿಸಿರುವುದು ಈಗಲೂ ತಂತ್ರಜ್ಞರಿಗೆ ಸೋಜಿಗದ ಸಂಗತಿ.

★ ಚಿತ್ರ ಬರಹ: **ವಿ. ಬಾಲಕೃಷ್ಣ ಶಿರ್ವ**



ಸುಲ್ತಾನ್ ಬತ್ತೇರಿಯ ಒಳನೋಟ